

# ಸಂತೆಯೊಳಗೊಂದು ಅರಮನೆಯ ಮಾಡಿ!

ರಾಣಿ ಎರಡನೇ ಎಲಿಜಬೆತ್

‘ಲಂಡನ್ನಿಗೆ ಬಂದೋರು, ವಿಂಡ್ಸರ್ ಕ್ಯಾಸಲ್‌ಗೆ ಬರದೇ ಇರುತ್ತಾರೆಯೇ?’–‘ಊರಿಗೆ ಬಂದವಳ..’ ಗಾದೆಯನ್ನು ಮೇಲಿನಂತೆಯೂ ಹೇಳಬಹುದು. ಅಷ್ಟೊಂದು ಪ್ರಖ್ಯಾತ, ವೈಭೋಗದ ಅರಮನೆ ಅದು. ಎಲ್ಲರೂ ನೋಡಲೇಬೇಕಾದ, ನೋಡಬೇಕೆಂಬ ಅದಮ್ಯ ಬಯಕೆಯನ್ನು ಹುಟ್ಟಿಸುವ ಭವ್ಯ ಕೋಟೆ.

ಲಂಡನ್‌ಗೆ ಹೋದವರು ವಿಂಡ್ಸರ್‌ನ ಆ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳದೇ ಹಿಂದಿರುಗುವುದು ಅಪರೂಪವೇ. ಬ್ರಿಟಿಷರ ಹೆಮ್ಮೆಯ ಕಿರೀಟ ಎಂದರೆ ‘ವಿಂಡ್ಸರ್ ಕ್ಯಾಸಲ್.’ ರಾಣಿ ಎರಡನೇ ಎಲಿಜಬೆತ್ ಅಧಿಕೃತ ನಿವಾಸವೂ ಆಗಿರುವ ಈ ಅರಮನೆಗೆ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವಿದೆ. ಬಕಿಂಗ್‌ಹ್ಯಾಂ ಮುಖ್ಯ ಅರಮನೆ ಇದ್ದರೂ, ಈಗಲೂ ವಾರಾಂತ್ಯವನ್ನು ರಾಣಿ ವಿಂಡ್ಸರ್ ಅರಮನೆಯಲ್ಲಿಯೇ ಕಳೆಯುವುದು. ನೋಡಲು ಭವ್ಯವಾಗಿರುವ ಈ ಅರಮನೆಯ ಕಿಟಕಿ, ಬಾಗಿಲು, ಕೋಟೆಯ ಕಲ್ಲು– ಕಲ್ಲುಗಳೂ ಬ್ರಿಟಿಷರ ವೈಭೋಗದ ಕತೆಯನ್ನು ಕಟ್ಟಿ ಕೊಡುತ್ತವೆ.

ಇಂತಿರುವ ಈ ವಿಶ್ವವಿಖ್ಯಾತ ‘ವಿಂಡ್ಸರ್ ಕ್ಯಾಸಲ್’ನಲ್ಲಿ ಇದೀಗ ಸಣ್ಣದೊಂದು ನಡುಕ ಹುಟ್ಟಿದೆ. ಅದಕ್ಕೆ ಕಾರಣ ಹೀಥ್ರೂ ವಿಮಾನ ನಿಲ್ದಾಣದಲ್ಲಿನ 3ನೇ ರನ್‌ವೇ ನಿರ್ಮಾಣದ ಯೋಜನೆ.

ಇನ್ನೂ ಆರಂಭಿಕ ಹಂತದಲ್ಲಿರುವ ಈ ಯೋಜನೆ ಅರಮನೆ ಸಿಬ್ಬಂದಿಯಲ್ಲಿ ಅಳುಕು ಹುಟ್ಟಿಸಲು ಕಾರಣವಿದೆ. ಈ ಯೋಜನೆ ಆರಂಭವಾದಲ್ಲಿ ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ, ವಿಂಡ್ಸರ್ ಅರಮನೆಯಲ್ಲಿ ವಾಸಿಸುವ ಮಹಾರಾಣಿಗೆ ಶಬ್ದಮಾಲಿನ್ಯದ ಕಿರಿಕಿರಿ ಉಂಟಾಗಲಿದೆ ಎನ್ನುವುದು ಅರಮನೆ ಸಿಬ್ಬಂದಿಯ ಆತಂಕ.

ತಮ್ಮ ವಾರಾಂತ್ಯದ ದಿನಗಳನ್ನು ಈ ಅರಮನೆಯಲ್ಲಿಯೇ ಕಳೆಯುವ 89ರ ಇಳಿವಯಸ್ಸಿನ ರಾಣಿ ಎಲಿಜಬೆತ್ ಅವರಿಗೆ ವಿಮಾನಗಳ ಹಾರಾಟದ ಶಬ್ದ ಕಿರಿಕಿರಿ ಉಂಟು ಮಾಡುವುದು ಸರಿಯಲ್ಲ ಎನ್ನುವುದು ಅರಮನೆ ಸಿಬ್ಬಂದಿಯ ವಾದ. ಸುತ್ತಮುತ್ತಲ ನಿವಾಸಿಗಳದ್ದೂ ಅದೇ ಆತಂಕ.

ಆದರೆ ಈ ಯೋಜನೆಯನ್ನು ಆರಂಭಿಸುವ ಮುನ್ನ ಇಲ್ಲಿನ ನಿವಾಸಿಗಳಿಗೆ ಸೂಕ್ತ ಭದ್ರತೆ ಒದಗಿಸಲಾಗುತ್ತದೆ ಎನ್ನುವುದು ಬ್ರಿಟನ್ನಿನ ವಾಯುಯಾನ ಇಲಾಖೆಯ ಸಮಜಾಯಿಷಿ. ಪೂರ್ತಿ ಅರಮನೆಗೆ ಶಬ್ದ ನಿರೋಧಕ ವ್ಯವಸ್ಥೆಯನ್ನು ಕಲ್ಪಿಸುತ್ತೇವೆ, ಇನ್ನೂ ಅನೇಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುತ್ತೇವೆ. ಬಳಿಕವಷ್ಟೇ ರನ್‌ವೇ ವಿಸ್ತರಣೆ ಎಂದು ಈ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಇಂಗ್ಲೆಂಡಿನ ರಾಣಿ ಅಂದರೆ ಸುಮ್ಮನೆಯೆ? ಇಲ್ಲಿ ರಾಣೀ ಪ್ರತ್ಯಕ್ಷ ದೇವತಾ! ಜನರ ಪಾಲಿಗೆ ಇದು ಬರೀ ಒಂದು ಅರಮನೆಯಾದರೆ ರಾಣಿಗದು ಹಳೆಯ ನೆನಪುಗಳು ಉಸಿರಾಡುವ ವಿಶಿಷ್ಟ ತಾಣ. ರಾಜಮನೆತನಕ್ಕೆ ಹತ್ತಾರು ಅರಮನೆಗಳಿದ್ದರೂ ಬಾಲ್ಯದಿಂದಲೂ ರಾಣಿಯ ನೆಚ್ಚಿನ ಅರಮನೆಯಿದು. 13 ಎಕರೆ ವಿಸ್ತೀರ್ಣದ ಆಸ್ತಿಯ ಮಧ್ಯೆ  ಭವ್ಯವಾಗಿ ಕಟ್ಟಿರುವ ಅರಮನೆಗೆ ‘ಸೌಂಡ್ ಪ್ರೂಫ್’ ವ್ಯವಸ್ಥೆ ಕಲ್ಪಿಸಲು 700 ದಶಲಕ್ಷ ಪೌಂಡ್ ಮೀಸಲಿಡಲು ಸರ್ಕಾರ ನಿರ್ಧರಿಸಿದೆ. ರನ್ ವೇ ನಿರ್ಮಾಣದಿಂದ ತೊಂದರೆಗೆ ಒಳಗಾಗುವ ಜನರಿಗೆ ಪರಿಹಾರ ನೀಡಲೆಂದೇ ಒಟ್ಟು 100 ಕೋಟಿ ಪೌಂಡ್ ಹಣವನ್ನು ಮೀಸಲಿಡಲಾಗಿದೆ. ಇದರಲ್ಲಿ ಬರೋಬ್ಬರಿ 70 ಕೋಟಿ ಪೌಂಡ್ ನಿಧಿ ರಾಣಿಯ ಪಾಲಾಗಲಿದೆ.

ಯಾರಿಗೆ ಸಾಲುತ್ತೆ?

ಇಡೀ ಅರಮನೆಗೆ ಶಬ್ದ ನಿರೋಧ ವ್ಯವಸ್ಥೆ ಕಲ್ಪಿಸಲು ಇಷ್ಟು ದುಡ್ಡು ಯಾವುದಕ್ಕೂ ಸಾಲದು ಎನ್ನುವುದು ಅರಮನೆ ಅಧಿಕಾರಿಗಳ ಸ್ಪಷ್ಟನೆ. ಈ ಕೋಟೆಯಂತಹ ಅರಮನೆಯಲ್ಲಿ ಒಟ್ಟು ಸುಮಾರು 1,000 ಕೊಠಡಿಗಳಿವೆ. ಕ್ರಿ.ಶ 1236ನೇ ಇಸ್ವಿಯಷ್ಟು ಹಳೆಯದಾದ ಅರಮನೆಯ ಬಾಗಿಲು, ಕಿಟಕಿಗಳೂ ಆ ಕಾಲದ್ದೇ. ಶಬ್ದನಿರೋಧಕ ವ್ಯವಸ್ಥೆ ಅಳವಡಿಸಿದ ಬಳಿಕ ಅದನ್ನು ನಿರ್ವಹಣೆ ಮಾಡುವುದು ಅರಮನೆಗೆ ದುಬಾರಿ ಖರ್ಚಿನ ಬಾಬತ್ತು ಆಗಬಹುದು ಎಂದು ಅರಮನೆ ಅಧಿಕಾರಿಗಳು ಹೇಳಿದ್ದಾರೆ.

ಈ ಭವ್ಯ ಅರಮನೆಯ ಮೂರು ವಿಭಾಗಗಳಾಗಿ ರೂಪುಗೊಂಡಿದೆ. ಮೇಲ್ಭಾಗದಲ್ಲಿ ರಾಜವಂಶದವರ ಖಾಸಗಿ ಕೋಣೆಗಳು, ಕೆಳಭಾಗದಲ್ಲಿ ಸಿಬ್ಬಂದಿ, ಸೈನಿಕರ ಕೋಣೆಗಳಿವೆ. ವಿಹಾರ ಮಾರ್ಗ, ಸುಂದರ ಉದ್ಯಾನಗಳು. ಒಂದೆಡೆ ಚರ್ಚ್ ಮತ್ತು ಇನ್ನೊಂದೆಡೆ ಪಹರೆಗೆ ನಿರ್ಮಿಸಲಾಗಿರುವ ಕೊತ್ತಳಗಳಿವೆ.

‘ಸೌಂಡ್‌ಪ್ರೂಫ್ ಅಳವಡಿಸುವಾಗ ಅರಮನೆಯ ಸಾಂಪ್ರದಾಯಕ ಹಾಗೂ ಪಾರಂಪರಿಕ ಚೆಲುವಿಗೆ ಕುಂದುಂಟಾಗದಂತೆ ನೋಡಿಕೊಳ್ಳಬೇಕು. ಮೂಲ ಸೌಂದರ್ಯದಲ್ಲಿ ಯಾವುದೇ ಬದಲಾವಣೆ ಮಾಡುವಂತಿಲ್ಲ. ಅರಮನೆಯ ನಡುವಿನ ಗೋಲಾಕಾರದ ಸೌಧ ಇಡೀ ಅರಮನೆಯ ಕಿರೀಟದಂತಿದೆ. ಅದನ್ನು ಮುಟ್ಟಬಾರದು’ ಎಂದೆಲ್ಲ ಅಧಿಕಾರಿಗಳು ಷರತ್ತುಗಳನ್ನು ವಿಧಿಸಿದ್ದಾರಂತೆ.

ನೂರಾರು ವರ್ಷಗಳ ಇತಿಹಾಸ ಹೊಂದಿರುವ ಈ ಅರಮನೆಯನ್ನು ಹಿಂದೆ ಹಲವು ಸಲ ರಿಪೇರಿ ಮಾಡಿದ್ದಿದೆ. ಆದರೆ ಆಗೆಲ್ಲ ತುಂಬ ಎಚ್ಚರಿಕೆ ವಹಿಸಿ, ಪಾರಂಪರಿಕ ಸೌಂದರ್ಯಕ್ಕೆ ಕುಂದುಂಟಾಗದಂತೆ ಕಾಪಾಡಲಾಗಿದೆ. ಈಗ ವಿಮಾನ ಹಾರಾಡುತ್ತದೆಂದು ಅದನ್ನೆಲ್ಲ ಬಿಟ್ಟುಕೊಡಲಾದೀತೆ? ಎಲ್ಲಕ್ಕಿಂತ ಮುಖ್ಯವಾಗಿ ರಾಣಿಯ ನೆಮ್ಮದಿ ಮುಖ್ಯ. ಇಂಗ್ಲಿಷರ ಪಾಲಿಗೆ ಇವತ್ತಿಗೂ ರಾಣಿ ಎಂದರೆ ಪ್ರತ್ಯಕ್ಷ ದೇವತೆಯೇ! ಆಕೆಯ ನೆಮ್ಮದಿಗಾಗಿ ಅವರು ಎಷ್ಟು ಖರ್ಚು ಮಾಡಲೂ ಸೈ.

■ ಸುಶೀ